ಅಗತ್ಯ ತುರ್ತು ದುರಸ್ಥಿ ಕಾಮಗಾರಿಗಳು ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಆರ್.ಓ.ಎಂ.ಟಿ (ರಿಪೇರಿ, ಒಡೆತನ, ನಿರ್ವಹಣೆ ಮತ್ತು ವರ್ಗಾವಣೆ) ಆಧಾರದ ಮೇಲೆ ಟೆಂಡರ್ ಕರೆದು ರಿಪೇರಿ ಮಾಡಿಸಲು ಕ್ರಮ ವಹಿಸಲಾಗುತ್ತಿದೆ. ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ 22 ಖಾಲಿ ಮಳಿಗೆಗಳಿದ್ದು, ಪೋಡಿಯಂ ಬ್ಲಾಕ್‌ನಲ್ಲಿ ಶೌಚಾಲಯ ನಿರ್ಮಿಸಬೇಕಾಗಿರುವುದರಿಂದ ಅಲ್ಲಿನ ತೆಂಗಿನಕಾಯಿ ವ್ಯಾಪಾರಸ್ಥರನ್ನು ಈ ಖಾಲಿ ಮಳಿಗೆಗಳಿಗೆ ಸ್ಥಳಾಂತರಿಸಲಾಗುವುದು. ಇನ್ನುಳಿದ ವಾಣಿಜ್ಯ ಸಂಕೀರ್ಣಗಳಲ್ಲಿ ಯಾವುದೇ ಮಳಿಗೆಗಳು ಖಾಲಿ ಇರುವುದಿಲ್ಲ.

ಊ) ಈ ವಾಣಿಜ್ಯ ಸಂಕೀರ್ಣಗಳಿಂದ ವಾರ್ಷಿಕ ನಿರ್ವಹಣೆಗೆ ಪಾಲಿಕೆಯಿಂದ ತಗಲುವ ವೆಚ್ಚ ರೂ. 2,80,36,490.00

1089(1548) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ವಾಣಿಜ್ಯ ಕ್ಷೇತ್ರ ವಸತಿ ಹಾಗೂ ಕೈಗಾರಿಕಾ ಕ್ಷೇತ್ರ ಎಂದು ಬಡಾವಣೆಗಳನ್ನು ಮತ್ತು ರಸ್ತೆಗಳನ್ನು ವಿಂಗಡಣೆ ಮಾಡಲಾಗಿದೆಯೇ;

ಆ) ಬೆಂಗಳೂರು ನಗರದ ಈ ಜಾಗಗಳನ್ನು ಖಾಸಗಿಯವರಿಗೆ ಲೀಸ್ ಕೊಡುವಾಗ ಬೆಂಗಳೂರು ಮಹಾನಗರ ಪಾಲಿಕೆ ಸರ್ಕಾರದ ಆಸ್ತಿ ಪರಭಾರೆ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳನ್ನು ಪಾಲಿಸುತ್ತಿದೆಯೇ;

ಇ) ಇದನ್ನು ಉಲ್ಲಂಘನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಹೌದು.

ಇ) ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1093(1172) ಶ್ರೀಎನ್.ಯೋಗಿಶ್ ಭಟ್(ಮಂಗಳೂರು) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಪಟ್ಟಣ ಯೋಜನಾ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ;

ಆ) ನೂತನ ಪಟ್ಟಣ ಯೋಜನಾ ಪ್ರಾಧಿಕಾರಗಳನ್ನು ರಚಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಇದ್ದಲ್ಲಿ, ಅವುಗಳು ಯಾವುವು;

ಈ) ಸರ್ಕಾರದವರು ಸದರಿ ಪಟ್ಟಣ ಪ್ರಾಧಿಕಾರಗಳಿಗೆ ನೀಡುತ್ತಿರುವ ಆರ್ಥಿಕ ಸಹಾಯಧನ ಎಷ್ಟು;

ಉ) ಪಟ್ಟಣ ಯೋಜನಾ ಪ್ರಾಧಿಕಾರಗಳ ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು;

ಊ) ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಮಗ್ರ ಸರ್ವೆ ಮಾಡುವ ವ್ಯವಸ್ಥೆ ಹಾಗೂ ಅಭಿವೃದ್ಧಿ ಯೋಜನೆಗಳ ತಯಾರಿಯ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ರಾಜ್ಯದಲ್ಲಿ ಬೆಂಗಳೂರನ್ನೂ ಸೇರಿಸಿ 28 ನಗರಾಭಿವೃದ್ಧಿ ಪ್ರಾಧಿಕಾರಗಳು, 24 ಯೋಜನಾ ಪ್ರಾಧಿಕಾರಗಳು, ಮತ್ತು 45 ಪುರಸಭಾ ಯೋಜನಾ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಪ್ರಾಧಿಕಾರಗಳಿಗೆ ಯಾವುದೇ ಆರ್ಥಿಕ ಸಹಾಯಧನವನ್ನು ಸರ್ಕಾರ ನೀಡುವುದಿಲ್ಲ.

ಉ) ನಿಯಮಾನುಸಾರ ಪಟ್ಟಣ ಯೋಜನಾ ಪ್ರಾಧಿಕಾರಗಳಿಗೆ ನೀಡಿರುವ ಅಧಿಕಾರದನ್ವಯ ಉಪಕರಗಳನ್ನು ಹಾಗೂ ಇತರೆ ಫೀ ಮುಂತಾದವುಗಳನ್ನು ಸಂಗ್ರಹಿಸಿ ಪಟ್ಟಣ ಯೋಜನಾ ಪ್ರಾಧಿಕಾರಗಳು ಆರ್ಥಿಕವಾಗಿ ಸುಧಾರಿಸಿ ಕೊಳ್ಳಬಹುದಾಗಿದೆ.

ಊ) ಏಷಿಯಾ ಅಭಿವೃದ್ಧಿ ಬ್ಯಾಂಕ್‌ನಿಂದ ಕೆಯುಐಡಿಎಫ್‌ಸಿಯ ಮೂಲಕ ಧನ ಸಹಾಯ ಪಡೆದು ಮೊದಲನೆಯ ಹಂತದಲ್ಲಿ 16 ನಗರ/ಪಟ್ಟಣಗಳಿಗೆ ವೈಮಾನಿಕ ಚಿತ್ರಣದ ಮೂಲಕ ದೊಡ್ಡ ಪ್ರಮಾಣದ ನಕ್ಷೆಗಳನ್ನು ತಯಾರಿಸುವ ಕೆಲಸ ಪ್ರಗತಿಯಲ್ಲಿದೆ. ಎರಡರಿಂದ ಐದು ಹಂತದಲ್ಲಿ ರಾಜ್ಯದ ಉಳಿದ 202 ನಗರ/ಪಟ್ಟಣಗಳಿಗೆ ವೈಮಾನಿಕ ಚಿತ್ರಣದ ಮೂಲಕ ದೊಡ್ಡ ಪ್ರಮಾಣದ ನಕ್ಷೆಗಳನ್ನು ತಯಾರಿಸಲು ಕೆಯುಐಡಿಎಫ್‌ಸಿಯ ಮೂಲಕ ವಿಶ್ವಬ್ಯಾಂಕ್‌ಗೆ ನೇರವಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ.

1094(1173) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪ್ರಕೃತಿ ವಿಕೋಪಕ್ಕೆ ಗುರಿಯಾಗುವ ಮೀನುಗಾರರ ಸುರಕ್ಷತೆಗಾಗಿ ಸರ್ಕಾರದವರು ಹಮ್ಮಿಕೊಂಡ ಯೋಜನೆಗಳೇನು;

ಆ) ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಷ್ಟು ಜನ ಮೀನುಗಾರರಿಗೆ ಪರಿಹಾರ ನೀಡಲಾಗಿದೆ;

ಇ) ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಲ್ಲಿ ಎಷ್ಟು ಜನ ಮೀನುಗಾರರಿಗೆ ಪರಿಹಾರವನ್ನು ನೀಲಾಗಿದೆ ಹಾಗೂ ಅದರ ಮೊತ್ತ ಎಷ್ಟು;

ಈ) 2004–05ರಲ್ಲಿ ಸಂಭವಿಸಿದ ಸುನಾಮಿ ಅಲೆಗಳಿಂದಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಸಮುದ್ರ ತೀರಗಳಲ್ಲಿ ನುಚ್ಚುನೂರಾದ ಮೀನುಗಾರರ ಬೋಟ್‌ಗಳಿಗೆ ನೀಡಿದ ಪರಿಹಾರ ಧನ ಎಷ್ಟು;

ಉ) ಪರಿಹಾರ ಧನ ನೀಡುವಲ್ಲಿನ ವಿಳಂಬಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಪ್ರಕೃತಿ ವಿಕೋಪಕ್ಕೆ ಗುರಿಯಾಗುವ ಮೀನುಗಾರರ ಸುರಕ್ಷತೆಗಾಗಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನೆಂದರೆ ;

1) ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಪರಿಹಾರಧನ ನೀಡುವುದು.